<u>ಕರ್ನಾಟಕ ವಿಧಾನಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	596
ಸದಸ್ಯರ ಹೆಸರು	:	ಶ್ರೀ ಹೆಚ್. ಎಂ. ರಮೇಶ್ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ಸಚಿವರು	:	ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	17-12-2021

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಸಾರಿಗೆ ಇಲಾಖೆಯಲ್ಲಿ ಎಷ್ಟು ನೌಕರರು ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿದ್ದಾರೆ; ಆಯಾ ವಲಯವಾರು ಮಾಹಿತಿಯನ್ನು ಒದಗಿಸುವುದು; ಅವರಿಗೆ ವೇತನವನ್ನು ಯಾವ ಆಧಾರದಲ್ಲಿ ನೀಡಲಾಗುತ್ತಿದೆ;	ಸಾರಿಗೆ ಇಲಾಖೆಯಲ್ಲಿ ಯಾವ ನೌಕರರೂ ಸಹ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿಲ್ಲ. ಆದರೆ 381 ನೌಕರರು ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆ. ಮಾಹಿತಿಯನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ನೌಕರರ ವೇತನವನ್ನು ಹೊರಗುತ್ತಿಗೆ ಆಧಾರದ ಮೇಲೆ ಕಾರ್ಮಿಕ ಕಾಯ್ದೆಯಡಿ ಕನಿಷ್ಠ ವೇತನ ನಿಗದಿಪಡಿಸಿರುವುದನ್ನು ಖಚಿತಪಡಿಸಿಕೊಂಡು ವೇತನವನ್ನು ಪಾವತಿಸಲಾಗುತ್ತಿದೆ.
(ಆ)	ಸಾರಿಗೆ ಇಲಾಖೆಯಲ್ಲಿ ಒಟ್ಟು ಎಷ್ಟು ಖಾಯಂ ಹುದ್ದೆಗಳು ಖಾಲಿ ಇವೆ; ಅವುಗಳಲ್ಲಿ ಬ್ಯಾಕ್ ಲಾಗ್ ಹುದ್ದೆಗಳೆಷ್ಟು; ಆಯಾ ವಲಯವಾರು ಮಾಹಿತಿ ನೀಡುವುದು; ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ಸದರಿ ಯಾವ ಕಾಲಮಿತಿಯೊಳಗೆ ತುಂಬಲು ಕ್ರಮಕೈಗೊಳ್ಳಲಾಗಿದೆ? (ಮಾಹಿತಿ ಒದಗಿಸುವುದು)	ಸಾರಿಗೆ ಇಲಾಖೆಯಲ್ಲಿ ಒಟ್ಟು 2812 ಖಾಯಂ ಹುದ್ದೆಗಳಿರುತ್ತವೆ. ಅವುಗಳಲ್ಲಿ ಬ್ಯಾಕ್ ಲಾಗ್ ಹುದ್ದೆಗಳು ಇರುವುದಿಲ್ಲ. ಮಾಹಿತಿಯನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ. ಸಾರಿಗೆ ಇಲಾಖೆಯಲ್ಲಿ ಖಾಲಿಯಿರುವ ನೇರ ನೇಮಕಾತಿ ಹುದ್ದೆಗಳ ಪೈಕಿ ಮೋಟಾರು ವಾಹನ ನಿರೀಕ್ಷಕರ 150 ಹುದ್ದೆಗಳ ನೇಮಕಾತಿ ಕುರಿತಂತೆ ಕರ್ನಾಟಕ ಲೋಕಸೇವಾ ಆಯೋಗವು ಅಧಿಸೂಚನೆ ಸಂಖ್ಯೆ: ಆರ್(2)609/19-20/ಪಿಎಸ್‌ಸಿ, ದಿನಾಂಕ:04-07-2019 ರಲ್ಲಿ ಒಟ್ಟು 129 ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಿರುತ್ತದೆ. ಅದರಲ್ಲಿ ಉಳಿಕೆ ಮೂಲ ವೃಂದದ 118 ಹುದ್ದೆಗಳು ಹಾಗೂ 11 ಕಲ್ಯಾಣ ಕರ್ನಾಟಕ ಹುದ್ದೆಗಳು ಇರುತ್ತವೆ. ಈ ಸಂಬಂಧ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಅರ್ಜಿ ಸಂಖ್ಯೆ: 4161-4162/2019 ರಲ್ಲಿ ದಿನಾಂಕ: 19-03-2020 ರಂದು ಹೊರಡಿಸಿರುವ ಅಂತಿಮ ತೀರ್ಪಿಗೆ ಸಂಬಂಧಿಸಿ ರಾಜ್ಯ ಸರ್ಕಾರವು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 9739/2020 (ಎಸ್-ಕೆಎಟಿ) ಯನ್ನು ದಾಖಲಿಸಲಾಗಿದೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಬಾಧಿತ ಅಭ್ಯರ್ಥಿಗಳು ಈ ಪ್ರಕರಣವನ್ನು ರಿಟ್ ಪಿಟಿಷನ್ ಸಂಖ್ಯೆ: 6774/2020 ರಲ್ಲಿ ದಾಖಲಿಸಿದ್ದಾರೆ. ಕರ್ನಾಟಕ ಲೋಕಸೇವಾ ಆಯೋಗವೂ ಕೂಡ ಸದರಿ ಪ್ರಕರಣದಲ್ಲಿ ರಿಟ್ ಪಿಟಿಷನ್ ದಾಖಲಿಸಿದೆ. ಈ

		ಎಲ್ಲಾ ಪ್ರಕರಣಗಳನ್ನು ಒಟ್ಟುಗೂಡಿಸಿ ದಿನಾಂಕ:25-08-2021 ರಂದು ರಿಟ್ ಪಿಟಿಷನ್ ಸಂಖ್ಯೆ: 6774/2020 ರಲ್ಲಿ ಆದೇಶವನ್ನು ಹೊರಡಿಸಲಾಗಿದೆ. ಈ ಪ್ರಕರಣದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ ಅಂತಿಮ ಪಟ್ಟಿಯನ್ನು ನಿರೀಕ್ಷಿಸಲಾಗುತ್ತಿದೆ. ಕಲ್ಯಾಣ ಕರ್ನಾಟಕ ರಾಜ್ಯ ಮಟ್ಟದ ಸ್ಥಳೀಯ ವೃಂದದಲ್ಲಿ ಖಾಲಿಯಾಗಿರುವ 05 ಪ್ರಥಮ ದರ್ಜೆ ಸಹಾಯಕರ ಮತ್ತು 05 ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಬೇಡಿಕೆ ಪಟ್ಟಿ ಸಲ್ಲಿಸಲಾಗಿದ್ದು, ಆ ಸಂಬಂಧ ಆಯೋಗವು ಕ್ರಮವಾಗಿ ತನ್ನ ಅಧಿಸೂಚನೆ ಸಂಖ್ಯೆ: ಪಿ.ಎಸ್.ಸಿ ಇ(2)3070/2019-20, ದಿನಾಂಕ: 31-01-2020 ಮತ್ತು ಪಿ.ಎಸ್.ಸಿ ಇ(3)801/2019-20, ದಿನಾಂಕ:29-02-2020 ರಂದು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿರುತ್ತದೆ. ಈಗಾಗಲೇ ಜಾರಿಯಲ್ಲಿರುವ 150 ಹುದ್ದೆಗಳ ನೇರನೇಮಕಾತಿ ಪ್ರಕ್ರಿಯೆಯನ್ನು ಹೊರತುಪಡಿಸಿ ಉಳಿದಂತೆ 136 ಹುದ್ದೆಗಳು ಹಾಗೂ ಇನ್ನುಳಿದ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಲು ಪರಿಶೀಲಿಸಲಾಗುತ್ತಿದ್ದು, ಖಾಲಿ ಇರುವ ಮುಂಬಡ್ತಿ ಹುದ್ದೆಗಳನ್ನು ಹಂತಹಂತವಾಗಿ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. ಕಾಲಕಾಲಕ್ಕೆ ಖಾಲಿಯಾಗಿರುವ/ಖಾಲಿಯಾಗುವ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಟಿಡಿ 116 ಟಿಡಿಕ್ಯೂ 2021

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ
ಪಂಗಡಗಳ ಕಲ್ಯಾಣ ಸಚಿವರು.

ಮಾನ್ಯ ವಿಧಾನ ಪರಿಷತ್ತ್ ಸದಸ್ಯರಾದ ಶ್ರೀ ಹೆಚ್. ಎಂ. ರಮೇಶ್ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 596 ಕ್ಕೆ ಅನುಬಂಧ-1

ಸಾರಿಗೆ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರ ವಿವರ

ಕ್ರ. ಸಂ.	ಯೋಜನೆಯ ಹೆಸರು	ಹೊರಗುತ್ತಿಗೆ ನೌಕರರ ಸಂಖ್ಯೆ	ಹೊರಗುತ್ತಿಗೆ ಸೇವೆಯನ್ನು ನೀಡುತ್ತಿರುವ ಸಂಸ್ಥೆಯ ಹೆಸರು
1	"ಸಕಾಲ" ಡಾಟಾ ಎಂಟ್ರಿ ಆಪರೇಟರ್	117	ಕಿಯೋನಿಕ್ಸ್ ಸಂಸ್ಥೆ, ಬೆಂಗಳೂರು.
2	ತಾಂತ್ರಿಕ ಸಹಾಯಕರು	69	ಕಿಯೋನಿಕ್ಸ್ ಸಂಸ್ಥೆ, ಬೆಂಗಳೂರು.
3	ವಾಹನ ಚಾಲಕರು	49	ಮೆ|| ವಿ.ಟಿ. ಎಂಟರ್ ಪ್ರೈಸಸ್, ಬೆಂಗಳೂರು.
4	ಬೆರಳಚ್ಚುಗಾರರು	1	ಕಿಯೋನಿಕ್ಸ್ ಸಂಸ್ಥೆ, ಬೆಂಗಳೂರು.
5	ಭದ್ರತಾ ಸಿಬ್ಬಂದಿ	58	ಮೆ|| ಡಿಟೆಕ್ಟ್‌ವೆಲ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.
6	ಹೌಸ್ ಕೀಪಿಂಗ್ ಸೂಪರ್‌ವೈಸರ್	10	ಮೆ|| ಪಾಂಚಜನ್ಯ ಮ್ಯಾನ್‌ಪವರ್ ಸರ್ವೀಸಸ್, ಬೆಂಗಳೂರು.
7	ಹೌಸ್ ಕೀಪಿಂಗ್ ಸ್ವೀಪರ್ಸ್	69	
8	ಶೌಚಾಲಯ ಸ್ವಚ್ಛತಾ ಸಿಬ್ಬಂದಿ	3	
9	ಗಾರ್ಡನರ್	4	
10	ಮ್ಯಾನೇಜರ್	1	

ಮಾನ್ಯ ವಿಧಾನ ಪರಿಷತ್ತ್ ಸದಸ್ಯರಾದ ಶ್ರೀ ಹೆಚ್. ಎಂ. ರಮೇಶ್ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 596 ಕ್ಕೆ ಅನುಬಂಧ-2

ದಿನಾಂಕ: 01-11-2021 ರಂತೆ ಸಾರಿಗೆ ಇಲಾಖೆಯ ಹುದ್ದೆಗಳ ವಿವರ

ಕ್ರ. ಸಂ.	ಹುದ್ದೆಯ ಹೆಸರು	ಹುದ್ದೆಗಳ ವಿವರ		
		ಮಂಜೂರಾತಿ	ಕಾರ್ಯನಿರತ	ಖಾಲಿ
1	ಸಾರಿಗೆ ಆಯುಕ್ತರು	1	1	0
2	ಅಧ್ಯಕ್ಷಾಧಿಕಾರಿಗಳು	1	1	0
3	ಅಪರ ಸಾರಿಗೆ ಆಯುಕ್ತರು	6	6	0
4	ಜಂಟಿ ಸಾರಿಗೆ ಆಯುಕ್ತರು (1 ಹುದ್ದೆ - ದೇವರಾಜ್ ಅರಸ್ ಟ್ರಕ್ ಟರ್ಮಿನಲ್)	7	7	0
5	ಉಪ ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು	3	2	1
6	ಪ್ರಾದೇಶಿಕ ಸಾರಿಗೆ ಅಧಿಕಾರಿ	47	35	12
7	ಎ-ಗ್ರೂಪ್ ಅಧಿಕಾರಿ (ಯೋಜನೆ)	1	0	1
8	ಎ-ಗ್ರೂಪ್ ಅಧಿಕಾರಿ (ಶಿಕ್ಷಣ)	1	1	0
9	ಎ-ಗ್ರೂಪ್ ಅಧಿಕಾರಿ (ಆರ್ಥಿಕ)	1	0	1
10	ಎ-ಗ್ರೂಪ್ ಅಧಿಕಾರಿ (ಲೋಕೋಪಯೋಗಿ)	1	1	0
11	ಎ-ಗ್ರೂಪ್ ಅಧಿಕಾರಿ (ಪೋಲೀಸ್)	1	1	0
12	ಎ-ಗ್ರೂಪ್ ಅಧಿಕಾರಿ (ಆರೋಗ್ಯ)	1	1	0
13	ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ	103	26	77
14	ಕಾನೂನು ಅಧಿಕಾರಿ	1	1	0
15	ಸಹಾಯಕ ಕಾನೂನು ಅಧಿಕಾರಿ	2	1	1
16	ಸಾಂಖ್ಯಿಕ ಸಹಾಯಕ ನಿರ್ದೇಶಕರು (ನಿಯೋಜನೆ ಹುದ್ದೆ)	1	1	0
17	ಆರ್ಥಿಕ ಸಲಹೆಗಾರರು (ನಿಯೋಜನೆ ಹುದ್ದೆ)	2	1	1
18	ಲೆಕ್ಕಾಧಿಕಾರಿಗಳು (ನಿಯೋಜನೆ ಹುದ್ದೆ)	6	0	6

19	ಸಿಸ್ಟಮ್ ಮ್ಯಾನೇಜರ್ (ನಿಯೋಜನೆ ಹುದ್ದೆ)	1	0	1
20	ಸಿಸ್ಟಮ್ ಅನಲಿಸ್ಟ್ (ನಿಯೋಜನೆ ಹುದ್ದೆ)	2	0	2
21	ಹಿರಿಯ ಪ್ರೋಗ್ರಾಮರ್ (ನಿಯೋಜನೆ ಹುದ್ದೆ)	2	0	2
22	ಕಿರಿಯ ಪ್ರೋಗ್ರಾಮರ್ (ನಿಯೋಜನೆ ಹುದ್ದೆ)	7	0	7
23	ಕನ್ಸೋಲ್ ಆಪರೇಟರ್	2	0	2
24	ಕೇಂ.ಸ್ಥಾ.ಸ/ತೆ.ಖ.ಅ/ಸಹಾಯಕ ಕಾರ್ಯದರ್ಶಿ	15	14	1
25	ಹಿರಿಯ ಮೋಟಾರು ವಾಹನ ನಿರೀಕ್ಷಕರು	214	87	127
26	ಮೋಟಾರು ವಾಹನ ನಿರೀಕ್ಷಕರು	430	121	309
27	ಅಧೀಕ್ಷಕರು	160	143	17
28	ಲೆಕ್ಕಾಧೀಕ್ಷಕರು (ನಿಯೋಜನೆ ಹುದ್ದೆ)	26	22	4
29	ಸಹಾಯಕ ಸಾಂಖ್ಯಿಕ ಅಧಿಕಾರಿ (ನಿಯೋಜನೆ ಹುದ್ದೆ)	3	3	0
30	ಲೆಕ್ಕ ಸಹಾಯಕರು (ನಿಯೋಜನೆ ಹುದ್ದೆ)	36	18	18
31	ಶೀಘ್ರಲಿಪಿಗಾರರು	49	23	26
32	ಪ್ರಥಮ ದರ್ಜೆ ಸಹಾಯಕರು	436	268	168
33	ದ್ವಿತೀಯ ದರ್ಜೆ ಸಹಾಯಕರು	546	208	338
34	ಬೆರಳಚ್ಚುಗಾರರು	116	33	83
35	ಚಾಲಕರು	165	87	78
36	ಅಟೆಂಡರ್/ಪ್ರೊಸೆಸ್ಸ್ ಸರ್ವರ್/ದಫೇದಾರ್	31	6	25
37	ಖಜಾನೆ ರಕ್ಷಕ	40	3	37
38	ದಲಾಯತ್/ಕಾವಲುಗಾರ/ಜವಾನ ಕಮ್ ರಕ್ಷಕ/ಸ್ವೀಪರ್	345	125	220
	ಒಟ್ಟು	2812	1247	1565